ಅಭಿವೃದ್ಧಿ ಶುಲ್ಕ ಸಂಗ್ರಹಿಸುವ ಪ್ರಕ್ರಿಯೆಯನ್ನು ತಡೆಹಿಡಿಯುವ ಮೂಲಕ ಏಕೆ ತಾರತಮ್ಯ ಎಸಗುತ್ತಿದ್ದೀರಿ? ಅಭಿವೃದ್ಧಿ ಶುಲ್ಕ ವಸೂಲು ಮಾಡುವಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಕಾನೂನು, ನಗರ ಸಭೆಗಳಿಗೆ ಒಂದು ಕಾನೂನು ಎಂದು ಏಕೆ ವ್ಯತ್ಯಾಸ ಮಾಡುತ್ತಿದ್ದೀರಿ? ಇದನ್ನು ತಪ್ಪಿಸಬೇಕು. ಹಿಂದೆ ಜನತಾ ದಳ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಇಂತಹ ಕಾನೂನನ್ನು ಜಾರಿಗೆ ತಂದಿದೆ. ಇದನ್ನು ಏಕೆ ತಡೆಗಟ್ಟಿದ್ದೀರಿ? ಆದುದರಿಂದ, ಕೂಡಲೇ ಇದರ ಬಗ್ಗೆ ಕ್ರಮ ಕೈಗೊಂಡು ಅಭಿವೃದ್ಧಿ ಶುಲ್ಕವನ್ನು ವಸೂಲು ಮಾಡಿದರೆ ನಗರಸಭೆಗಳಿಗೆ ಆದಾಯ ಬರುತ್ತದೆ. ಇಲ್ಲದಿದ್ದರೆ, ಸರ್ಕಾರದ ಅನುದಾನಕ್ಕಾಗಿ ಕಾಯುವ ಪರಿಸ್ಥಿತಿ ಉಂಟಾಗುತ್ತದೆ. ಅಲ್ಲದೆ, ಅಭಿವೃದ್ಧಿ ಕಾರ್ಯಗಳೂ ಸಹ ಕುಂಠಿತಗೊಂಡಿರುವುದರಿಂದ, ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಸರ್ಕಾರದಲ್ಲಿ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಈ ಬಗ್ಗೆ ಸರ್ಕಾರ ನ್ಯಾಯಯುತ ತೀರ್ಮಾನ ಕೈಗೊಂಡರೆ ನಗರಸಭೆಗಳು ಉದ್ಧಾರವಾಗುತ್ತವೆ. ಅಷ್ಟೇ ಅಲ್ಲದೆ, ಬೆಂಗಳೂರು ಹೊರವಲಯವೂ ಅಭಿವೃದ್ಧಿಯಾಗಬೇಕು. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ ರೆವಿನ್ಯೂ ನಿವೇಶನಗಳಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ದಂಡ ವಿಧಿಸುವ ಮೂಲಕ ಸಕ್ರಮಗೊಳಿಸುವ ಕಾರ್ಯ ಜರಗುತ್ತಿದೆ. ಈ ಕುರಿತಂತೆ ಹಿಂದೆ ಒಂದು ಸಂಪುಟ ಉಪ ಸಮಿತಿ ರಚನೆಯಾಗಿ, ಮಧ್ಯೆ ನಿಂತುಹೋಯಿತು. ಬೆಂಗಳೂರು ಮಾತ್ರವಲ್ಲದೆ ಮೈಸೂರು ಹಾಗೂ ಇನ್ನಿತರ ಅನೇಕ ಪಟ್ಟಣ ಪ್ರದೇಶಗಳಲ್ಲಿ ಈ ಕುರಿತಾದ ಕಾನೂನು ತೊಡಕಿದೆ. ಕಾನೂನಿಗೆ ತಿದ್ದುಪಡಿಯಾಗಬೇಕೆಂಬ ಕಾರಣವೂ ಇತ್ತು. ಈ ಕಾನೂನನ್ನು ಪರಿಶೀಲಿಸುವ ಮೂಲಕ ಕಾನೂನು ರೀತ್ಯ ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ತಮಗೆ ಹೇಳಬಯಸುತ್ತಿದ್ದೇನೆ. ಅಲ್ಲದೆ, ಒಂದೇ ಕಾನೂನಿದ್ದು, ಕಾರ್ಪೊರೇಷನ್‌ಗೆ ಮಾತ್ರ ಅನ್ವಯವಾಗಿ, ಸಿಟಿ ಮುನಿಸಿಪಾಲಿಟಿ ಕಾರ್ಪೊರೇಷನ್‌ಗಳಿಗೆ ಅನ್ವಯವಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನು ಒಂದೇ, ಅದು ಎಲ್ಲಾದಕ್ಕೂ ಅನ್ವಯವಾಗಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಏಕೆ ಅನ್ವಯವಾಗುವುದಿಲ್ಲವೆಂಬ ಅಂಶವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಋ) ವಿಷಯ: ಕಾರ್ಕಳದಲ್ಲಿ ಜನತಾ ದಳ ಕಾರ್ಯಕರ್ತನ ಹತ್ಯೆ ಸಂಬಂಧ ಆರೋಪಿಗಳನ್ನು ಬಂಧಿಸುವ ಕುರಿತು.

.....

ಶ್ರೀವಿ.ಸುನೀಲ್‌ಕುಮಾರ್ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಕಳೆದ ಫೆಬ್ರವರಿ ತಿಂಗಳ 23ನೇ ತಾರೀಖಿನಂದು ರಾತ್ರಿ ಕಾರ್ಕಳದ ಪಂಚಾಯಿತಿ ಚುನಾವಣೆಗೆ ಜನತಾದಳ ಪಕ್ಷದಿಂದ ಸ್ಪರ್ಧಿಸಿದ್ದ ದಿವಾಕರ ಶೆಟ್ಟಿ ಎಂಬುವವರ ಕೊಲೆಯಾಗಿದೆ. ಸುಮಾರು 10–12 ಜನರಿದ್ದ ಗುಂಪೊಂದು ತಲವಾರ್‌ಗಳನ್ನು ಹಿಡಿದುಕೊಂಡು ಬಂದು ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದೆ. ಈ ಸಂಬಂಧ 22 ಜನರ ಮೇಲೆ ಪೋಲೀಸ್ ಇಲಾಖೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಇದಾಗಿ 20 ದಿವಸಗಳು ಕಳೆದಿದ್ದರೂ ಸರ್ಕಾರ ಇದುವರೆಗೂ ಒಬ್ಬ ಆರೋಪಿಯನ್ನೂ ಸಹ ಬಂಧಿಸಿರುವುದಿಲ್ಲ. ಜನತಾದಳದ ಒಬ್ಬ ಕಾರ್ಯಕರ್ತನ ಕೊಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ

ಪ್ರಕರಣದಲ್ಲಿ ಪೊಲೀಸ್ ಇಲಾಖೆ ಶಾಮೀಲಾಗಿದೆಯೆಂದು ಕಾರ್ಕಳದ ಇಡೀ ಜನರು ಮಾತನಾಡುತ್ತಿದ್ದಾರೆ. ಕೊಲೆ ಆರೋಪಿಗಳು ಎರಡು ದಿವಸಗಳ ಕಾಲ ಕ್ಷೇತ್ರ ಬಿಟ್ಟು ಹೋಗಲಿಲ್ಲ. ಅವರು ತಮ್ಮ ಮನೆಗಳಲ್ಲೇ ಉಳಿದುಕೊಂಡಿದ್ದಾರೆ. ಕೊಲೆ ಮಾಡಿದ ಆರೋಪಿಗಳು ಯಾರೆಂಬುದು ಇಡೀ ಕ್ಷೇತ್ರದ ಜನತೆಗೆ ಗೊತ್ತಿದೆ. ಒಂಭತ್ತು ಜನರ ತಂಡ ಪದೇ ಪದೇ ಕಾರ್ಕಳ ಕ್ಷೇತ್ರದಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸುತ್ತಾ ಅಶಾಂತಿ ವಾತಾವರಣ ನಿರ್ಮಿಸುತ್ತಿದ್ದರೂ ಸರ್ಕಾರವಾಗಲಿ, ಪೊಲೀಸ್ ಇಲಾಖೆಯಾಗಲಿ ಇದುವರೆಗೂ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಕೊಲೆ ಜರಗಿರುವ ಸಂಬಂಧ ಪೊಲೀಸ್ ಇಲಾಖೆಯೂ ಶಾಮೀಲಾಗಿದೆಯೆಂದು ಜನರು ಇಲಾಖೆ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಆದಕಾರಣ, ಈ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಸರ್ಕಾರ ತಕ್ಷಣವೇ ಕೊಲೆ ಆರೋಪಿಗಳನ್ನು ಬಂಧಿಸುವ ಮೂಲಕ ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆ ಬಗ್ಗೆ ಜನರು ಅನುಮಾನಪಡುತ್ತಿರುವುದರಿಂದ ಆ ಬಗ್ಗೆಯೂ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಮಾತನಾಡಿ, ಈ ಕೊಲೆ ಪ್ರಕರಣ ಸಂಬಂಧದಲ್ಲಿ ಯಾವ ಕಾರಣಕ್ಕಾಗಿ ಆರೋಪಿಗಳನ್ನು ಪೊಲೀಸರು ಇನ್ನೂ ದಸ್ತಗಿರಿ ಮಾಡುವುದಕ್ಕಾಗಿಲ್ಲವೆಂಬ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇಲ್ಲ. ಆರೋಪಿಗಳನ್ನು ಬಂಧಿಸಲು ಏಕೆ ತಡವಾಗಿದೆ ಎಂಬ ಮಾಹಿತಿಯನ್ನು ತರಿಸಿಕೊಂಡು, ಆರೋಪಿಗಳನ್ನು ಬಂಧಿಸುವುದಕ್ಕೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರದ ಪರವಾಗಿ ನಾನು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ.

(ಎ) ವಿಷಯ: ಸದನದ ಅಧಿಕಾರಿಗಳ ಗ್ಯಾಲರಿಯಲ್ಲಿ ಇಲಾಖಾಧಿಕಾರಿಗಳು ಉಪಸ್ಥಿತರಿಲ್ಲದಿರುವ ಕುರಿತು.

.....

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸಾಧ್ಯವಾದರೆ ಸದನವನ್ನು ಈಗ ಹತ್ತು ನಿಮಿಷಗಳ ಕಾಲ ಮುಂದೂಡಬೇಕು. ನೀವು ನಮ್ಮ ರಕ್ಷಣೆಗೆ ಬರಬೇಕು. ಆಡಳಿತ ಪಕ್ಷದ ಮೊದಲ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಲ್ಲ, ಉಪ ಮುಖ್ಯಮಂತ್ರಿಗಳೂ ಹೊರಟು ಹೋದರು, ತೊಂದರೆಯಿಲ್ಲ. ಅವರಿಗೆ ಕೆಲಸ ಕಾರ್ಯಗಳಿರುತ್ತದೆ, ಹೋಗುತ್ತಾರೆ. ಆದರೆ, ಇಲ್ಲಿ ಜವಾಬ್ದಾರಿ ಇರುವವರು ಯಾರಿದ್ದಾರೆ? ಶೂನ್ಯ ವೇಳೆಯಲ್ಲಿ ಇಷ್ಟು ಮಹತ್ವವಾದ ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವಾಗ ಸಂಬಂಧಪಟ್ಟ ಉನ್ನತಾಧಿಕಾರಿಗಳು ಅದನ್ನು ಗಮನಕ್ಕೆ ತಂದುಕೊಂಡು ಕಾರ್ಯರೂಪಕ್ಕೆ ತರುವಂಥ ವ್ಯವಸ್ಥೆ ಇದೆಯೆಂದು ನಾವು ತಿಳಿದುಕೊಂಡಿದ್ದೇವೆ. ಅಪರೂಪಕ್ಕೆ ಸದನದಲ್ಲಿ ಇಂತಹ ಪ್ರಮುಖ ವಿಷಯಗಳು ಪ್ರಸ್ತಾವಾದಾಗ ಅಧಿಕಾರಿಗಳ ಗ್ಯಾಲರಿಯಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಇಲ್ಲವೆಂದರೆ ಹೇಗೆ?... ಸಿಂಧ್ಯಾರವರೆ, ಇವರಿಗೇನು ಧಾಡಿ? ಅಧಿಕಾರಿಗಳು ಎಲ್ಲಿಗೆ ಹೋಗುತ್ತಾರೆ? ಅವರಿಗೆ ಪುರುಸೊತ್ತು ಇಲ್ಲವೇ? ಮುಖ್ಯಮಂತ್ರಿಗಳಾದವರು ಅಧಿಕಾರಿಗಳ ದಂಡು ಕಟ್ಟಿಕೊಂಡು ಬಂದು